# ಆತ್ಮಕತೆ: ಸಾಹಿತ್ಯದ ಆತ್ಮ

ಯಾವುದೇ ಭಾಷೆಯಲ್ಲಿ ಆತ್ಮಕತೆ ಆಕರ್ಷಕ ಸಾಹಿತ್ಯ ಪ್ರಕಾರ. ಅದಕ್ಕೆ ಅದರದೇ ಆದ ಓದುಗರಿದ್ದಾರೆ. ನಮ್ಮ ಕನ್ನಡ ಲೇಖಕರ ಆತ್ಮಚರಿತ್ರೆಗಳಂತೂ ನಿರಂತರವಾಗಿ ಓದಿಸಿಕೊಳ್ಳುತ್ತಲೇ ಇವೆ. ಆತ್ಮಕತೆಗೆ ಸಂಬಂಧಿಸಿದಂತೆ ಓದುಗರಿಗೆ ಇರುವ ಆಸಕ್ತಿ ಮನುಷ್ಯನ ಕುರಿತಾದದ್ದು, ಗ್ರಹಿಕೆಗೆ ಸಿಗದ ಬದುಕಿನ ಅನೂಹ್ಯ ನಡೆಯ ಬಗೆಗಿನದು. ನಮಗೆ ಎದುರಾಗುವ ಹಲವು ಪ್ರಶ್ನೆಗಳಿಗೆ, ಸವಾಲುಗಳಿಗೆ ಉತ್ತಮ ಆತ್ಮಕಥನವೊಂದು ತನ್ನಲ್ಲಿ ಉತ್ತರಗಳನ್ನು ಇಟ್ಟುಕೊಂಡಿರಬಹುದು. ಅದರ ಓದಿನಿಂದ ನಾವು ಹೊಸ ಚೈತನ್ಯ, ಹುಮ್ಮಸ್ಸು, ಸ್ಫೂರ್ತಿಯನ್ನು ಕಂಡುಕೊಳ್ಳುವ ಸಾಧ್ಯತೆ ಇರುತ್ತದೆ. ಈ ಬಗೆಯ ಪುಸ್ತಕಗಳನ್ನು ಜನರು ಯಾಕೆ ಓದುತ್ತಾರೆ ಎಂಬುದಕ್ಕೆ ಸರಳ ಉತ್ತರ ಏನೆಂದರೆ, ನಮ್ಮ ಬದುಕಿಗಿಂತ ಇನ್ನೊಬ್ಬರ ಬದುಕು ಹೆಚ್ಚು ಕುತೂಹಲ ಹುಟ್ಟಿಸುತ್ತಿರುತ್ತದೆ!


ಕಲೆ: ಬಸವರಾಜಾಚಾರ್ ಕೆ.ಆರ್.

ಆತ್ಮಚರಿತ್ರೆಗಳನ್ನು ಒಂದು ಕಾಲಮಾನದ ದಾಖಲೆಯಾಗಿ, ಇತಿಹಾಸವಾಗಿ, ಕಲ್ಪನೆಯನ್ನು ತೊರೆದ ಕಾದಂಬರಿಯಾಗಿಯೂ ಓದಬಹುದು. ಆದರೆ, ಬದುಕನ್ನು ಎದುರಿಸಿ ಜೀವಿಸಿದವನೊಬ್ಬನ ದಿಟ್ಟತನವನ್ನು, ದಟ್ಟ ನೆನಪುಗಳನ್ನು, ತಣ್ಣನೆ ದನಿಯನ್ನು ಪಡೆದಿದ್ದರೆ ಮಾತ್ರ ಅದಕ್ಕೆ ಬೇರೆಯದೇ ರುಚಿ. ಅಲ್ಲಿ ಸೋಲು ಗೆಲುವಿನ ಪರಿಚಿತ ಮಾನದಂಡ ಇರಬೇಕಿಲ್ಲ. ತನ್ನದೇ ಆದ ಬದುಕನ್ನು, ಅನುಭವವನ್ನು ಹಿಡಿಯಲು ಪ್ರಯತ್ನಿಸಿದವನ ದಾಖಲೆ ಅದು. ಅದರಲ್ಲಿ ಅವಮಾನ, ಪ್ರಯೋಗ, ಸಾಧನೆ, ಹುಂಬತನ, ಅಸಹಾಯಕತೆ, ದ್ರೋಹ, ಪ್ರೇಮ, ಹೋರಾಟ, ಸೋಲಿನ ನಿಟ್ಟುಸಿರು ಇವೆಲ್ಲ ಇರುತ್ತವೆ. ಅವನ್ನು ನಿಷ್ಠುರವಾಗಿ, ಪ್ರಾಮಾಣಿಕವಾಗಿ ದಾಖಲಿಸಬೇಕಾಗುತ್ತದೆ. ಕೆಲವು ಆತ್ಮಕಥನಗಳು ನಮ್ಮ ನಿರೀಕ್ಷೆಯ ಎಲ್ಲೆಗಳನ್ನು ಮೀರುವಷ್ಟು ವಿಚಿತ್ರವಾಗಿರುತ್ತವೆ. ಹಾಗೆ ಕನ್ನಡ ಓದುಗರಿಗೆ ಹೊಸ ಲೋಕವನ್ನು, ಬದುಕಿನ ವೈವಿಧ್ಯವನ್ನು ಪರಿಚಯಿಸಿದ್ದು ಅನುವಾದಿತ ಆತ್ಮಕತೆಗಳು. ಅದರಲ್ಲೂ ಮರಾಠಿಯ ಆತ್ಮಕತೆಗಳು ವಾಸ್ತವದ ದಿಟ್ಟ ಮಂಡನೆಯಿಂದಲೇ ಓದುಗರನ್ನು ಸೆಳೆದವು. ದಯಾ ಪವಾರರ 'ಬಲೂತ', ಲಕ್ಷ್ಮಣ ಗಾಯಕವಾಡ ಅವರ 'ಉಚಲ್ಯಾ', ಶರಣಕುಮಾರ ಲಿಂಬಾಳೆ ಅವರ 'ಅಕ್ರಮ ಸಂತಾನ', ಮಾಧವಿ ದೇಸಾಯಿ ಅವರ 'ಕುಣಿಯೇ ಘುಮಾ' ಇಂತಹ ಕೆಲವು ಆತ್ಮಕತೆಗಳಾಗಿದ್ದವು. ತಮ್ಮ ಆತ್ಮಕಥನದಿಂದ ಸಾಹಿತ್ಯ ಲೋಕದಲ್ಲಿ ಗುರುತಿಸಿಕೊಂಡ ಶರಣಕುಮಾರ ಲಿಂಬಾಳೆ ಅವರ 'ಸನಾತನ' ಕಾದಂಬರಿಗೆ 'ಸರಸ್ವತಿ ಸಮ್ಮಾನ' ಪ್ರಶಸ್ತಿ ಬಂದಿದೆ. ಅವರೊಂದಿಗೆ ನಡೆಸಿದ ಮಾತುಕತೆಯನ್ನು (ಸಂ: ಚಂದ್ರಕಾಂತ ಪೋಕಳೆ) ಈ ಸಂಚಿಕೆಯಲ್ಲಿ ಕೊಡಲಾಗಿದೆ. ಅದರಲ್ಲಿ ಲಿಂಬಾಳೆ ಅವರು 'ಆತ್ಮಕತೆ ದಲಿತ ಸಾಹಿತ್ಯದ ಆತ್ಮವಿದ್ದಂತೆ' ಎಂದಿದ್ದಾರೆ. ಇದು ಸಾಹಿತ್ಯದಲ್ಲಿ ಆ ಪ್ರಕಾರದ ಮಹತ್ತ್ವವನ್ನು ವರ್ಣಿಸುವ ಬೀಜರೂಪಿ ಮಾತಾಗಿದೆ.

ರಾಜಕಾರಣಿ ಬಿ. ಬಸವಲಿಂಗಪ್ಪ ಅವರ 'ಬೂಸಾ ಪ್ರಕರಣ'ದ ಹಲವು ಆಯಾಮಗಳನ್ನು ಪರಿಶೀಲಿಸುವ ರಹಮತ್ ತರೀಕೆರೆ ಅವರ ಲೇಖನ ಈ ಸಂಚಿಕೆಯಲ್ಲಿದೆ. ಕನ್ನಡಕ್ಕೆ 'ಬೂಸಾ ಸಾಹಿತ್ಯ' ಎಂಬ ಪರಿಭಾಷೆಯನ್ನು ಕೊಟ್ಟ ಬಸವಲಿಂಗಪ್ಪ ಅವರ 'ಬೂಸಾ ಪ್ರಕರಣ'(1973)ಕ್ಕೆ ಹತ್ತಿರ ಹತ್ತಿರ ಅರ್ಧಶತಮಾನ. ಅದು ಕರ್ನಾಟದ ಸಾಹಿತ್ಯ ವಲಯದಲ್ಲಿ ಬೀರಿದ ಪ್ರಭಾವ ಅಸಾಧಾರಣವಾದದ್ದು. ಈ ಲೇಖನ ಮತ್ತು ಸಂದರ್ಶನ ಈ ಸಂಚಿಕೆಯ ವಿಶೇಷಗಳಾಗಿವೆ.

**ಸಂದೀಪ ನಾಯಕ**